# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಸಂಗೀತ ಮತ್ತು ನೃತ್ಯ ವಿಭಾಗ

**ಪಂಡಿತ್ ಪುಟ್ಟರಾಜ ಗವಾಯಿ ಹಾಗೂ ಗಂಗೂಬಾಯಿ ಹಾನಗಲ್** ಅವರ ಜನ್ಮ ದಿನೋತ್ಸವದ ಅಂಗವಾಗಿ
**ವಿಶೇಷ ಉಪನ್ಯಾಸ ಮತ್ತು ಸಂಗೀತ ಕಾರ್ಯಕ್ರಮ – 05.03.2025**

# ಸಾಧಕರ ಸ್ಮರಣೆಯೇ ಜನ್ಮದಿನೋತ್ಸವ : ಡಾ. ಕಾಶಿಲಿಂಗ ಮಠ

ಸಾಮಾನ್ಯರು ಜನ್ಮ ದಿನವನ್ನು ಆಚರಿಸಿದರೆ ಸಮಾಜಕ್ಕಾಗಿ ತಮ್ಮ ಸೇವೆಯನ್ನು ಮೀಸಲಿಟ್ಟು ಸಾಧನೆಮಾಡಿ ತಮ್ಮಲ್ಲಿರುವ ಜ್ಞಾನವನ್ನು ವಿದ್ಯೆಯ ರೂಪದಲ್ಲಿ ಸಾಮಾನ್ಯರಿಗೆ ನೀಡಿದವರ ಸ್ಮರಣೆಯ ಅಂಗವಾಗಿ ಜನ್ಮದಿನೋತ್ಸವವನ್ನು ಆಚರಣೆ ಮಾಡಲಾಗುತ್ತದೆ ಎಂದು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ **ಡಾ. ಕಾಶಿಲಿಂಗ ಮಠ** ಅವರು ಹೇಳಿದರು.




ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ಕಾಶಿಲಿಂಗ ಮಠ ಅವರು ಪುಟ್ಟರಾಜ ಗವಾಯಿಗಳ ಜೀವನ ಚರಿತ್ರೆ ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ **ಸಂಗೀತ ಮತ್ತು ನೃತ್ಯ ವಿಭಾಗ** ವತಿಯಿಂದ 5ನೇ ಮಾರ್ಚ್ 2025ರಂದು ವಿಭಾಗದಲ್ಲಿ **ಪಂಡಿತ್ ಪುಟ್ಟರಾಜ ಗವಾಯಿ ಹಾಗೂ ಗಂಗೂಬಾಯಿ ಹಾನಗಲ್** ಅವರ **ಜನ್ಮ ದಿನೋತ್ಸವದ** ಅಂಗವಾಗಿ ಅವರ **ಜೀವನ ಮತ್ತು ಸಾಧನೆ** ಎಂಬ **ವಿಶೇಷ ಉಪನ್ಯಾಸ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ **ಪುಟ್ಟರಾಜ ಗವಾಯಿಗಳ ಜೀವನ ಚರಿತ್ರೆ** ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡುತ್ತ ಸಂಗೀತದಲ್ಲಿ ಧರ್ಮ, ಕರ್ಮ ಹಾಗೂ ರಕ್ತ ಸಂಬಂಧ ಇರುವುದಿಲ್ಲ, ಅಲೌಕಿಕ ಸಂಬಂಧ ಮಾತ್ರ ಇರುತ್ತದೆ. ಸಂಗೀತ ಕ್ಷೇತ್ರದಲ್ಲಿ ಪ್ರಮಾಣಪತ್ರಗಳು ಮುಖ್ಯವಲ್ಲ, ಸಂಗೀತ ಜ್ಞಾನ ಮುಖ್ಯವಾಗುತ್ತದೆ ಎಂದು ತಿಳಿಸಿದರು..



ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ **ಡಾ. ವೀರೇಶ ಬಡಿಗೇರ** ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ, ಮಾತನಾಡಿದ ಅವರು ಕಷ್ಟ ಕಾಲದಲ್ಲಿ ಸಹಾಯ ಮಾಡಿದ ವ್ಯಕ್ತಿಗಳನ್ನು ಜೀವನದಲ್ಲಿ ಯಾವತ್ತೂ ಮರೆಯಬಾರದು. ನಾವು ಸೌಲಭ್ಯಗಳ ಸಂತೆಯಲ್ಲಿ ಇದ್ದೇವೆ ಆದರೆ ಕಲಿಕೆಯಲ್ಲಿ ವಂಚಿತರಾಗುತ್ತಿದ್ದೇವೆ. ಯಾವುದೇ ಸಂಪನ್ಮೂಲಗಳು ಏಕಕಾಲಕ್ಕೆ ಮುಗಿದು ಹೋಗಬಾರದು ಅವುಗಳನ್ನು ನಾವು ಸೂಕ್ತ ರೀತಿಯಲ್ಲಿ ಬಳಸಬೇಕು. ಇನ್ನು ಮುಖ್ಯವಾಗಿ ಶ್ರದ್ಧೆ ಆಸಕ್ತಿ ಇದ್ದರೆ ಮಾತ್ರ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖಸ್ಥರು, ಪ್ರಾಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ್ ಹೆಚ್. ಕಾರ್ಯಕ್ರಮವನ್ನು ನಿರೂಪಿಸಿದರು. ಹರೀಶ್ ಭಂಡಾರಿ ಅವರು ಗಣ್ಯರನ್ನು ಸ್ವಾಗತಿಸಿದರು. ದೊಡ್ಡಮನೆ ಜ್ಯೋತಿ ಕಾರ್ಯಕ್ರಮವನ್ನು ವಂದಿಸಿದರು.









HPT-08032025-4-page-003
08 Mar 2025

ಹೊಸಪೇಟೆ HOSPET TIMES ಟೈಮ್ಸ್

## ಪಂಡಿತ್ ಪುಟ್ಟರಾಜ ಗವಾಯಿ ಹಾಗೂ ಗಂಗೂಬಾಯಿ ಹಾನಗಲ್ ಅವರ ಜನ್ಮ ದಿನೋತ್ಸವ

# ಸಾಧಕರ ಸ್ಮರಣೆಯೇ ಜನ್ಮದಿನೋತ್ಸವ : ಡಾ.ಕಾಶಿಲಿಂಗ ಮಠ

**ಹೊಸಪೇಟೆ ಟೈಮ್ಸ್ ನ್ಯೂಸ್**

**ವಿಜಯನಗರ(ಹೊಸಪೇಟೆ):** ಸಾಮಾನ್ಯರು ಜನ್ಮ ದಿನವನ್ನು ಆಚರಿಸಿದರೆ ಸಮಾಜಕ್ಕಾಗಿ ತಮ್ಮ ಸೇವೆಯನ್ನು ಮೀಸಲಿಟ್ಟು ಸಾಧನೆಮಾಡಿ ತಮ್ಮಲ್ಲಿರುವ ಜ್ಞಾನವನ್ನು ವಿದ್ಯೆಯ ರೂಪದಲ್ಲಿ ಸಾಮಾನ್ಯರಿಗೆ ನೀಡಿದವರ ಸ್ಮರಣೆಯ ಅಂಗವಾಗಿ ಜನ್ಮದಿನೋತ್ಸವವನ್ನು ಆಚರಣೆ ಮಾಡಲಾಗುತ್ತದೆ ಎಂದು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ಕಾಶಿಲಿಂಗ ಮಠ ಅವರು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗ ವತಿಯಿಂದ 5ನೇ ಮಾರ್ಚ್ 2025ರಂದು ವಿಭಾಗದಲ್ಲಿ ಪಂಡಿತ್ ಪುಟ್ಟರಾಜ ಗವಾಯಿ ಹಾಗೂ ಗಂಗೂಬಾಯಿ ಹಾನಗಲ್ ಅವರ ಜನ್ಮ ದಿನೋತ್ಸವದ ಅಂಗವಾಗಿ ಅವರ ಜೀವನ ಮತ್ತು ಸಾಧನೆ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪುಟ್ಟರಾಜ ಗವಾಯಿಗಳ ಜೀವನ ಚರಿತ್ರೆ ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡುತ್ತ ಸಂಗೀತದಲ್ಲಿ ಧರ್ಮ, ಕರ್ಮ ಹಾಗೂ ರಕ್ತ ಸಂಬಂಧ ಇರುವುದಿಲ್ಲ, ಅಲೌಕಿಕ ಸಂಬಂಧ ಮಾತ್ರ ಇರುತ್ತದೆ. ಸಂಗೀತ ಕ್ಷೇತ್ರದಲ್ಲಿ ಪ್ರಮಾಣಪತ್ರಗಳು ಮುಖ್ಯವಲ್ಲ, ಸಂಗೀತ ಜ್ಞಾನ ಮುಖ್ಯವಾಗುತ್ತದೆ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ, ಮಾತನಾಡಿದ ಅವರು ಕಷ್ಟ ಕಾಲದಲ್ಲಿ ಸಹಾಯ ಮಾಡಿದ ವ್ಯಕ್ತಿಗಳನ್ನು ಜೀವನದಲ್ಲಿ ಯಾವತ್ತೂ ಮರೆಯಬಾರದು. ನಾವು ಸೌಲಭ್ಯಗಳ ಸಂತೆಯಲ್ಲಿ ಇದ್ದೇವೆ ಆದರೆ ಕಲಿಕೆಯಲ್ಲಿ ವಂಚಿತರಾಗುತ್ತಿದ್ದೇವೆ. ಯಾವುದೇ ಸಂಪನ್ಮೂಲಗಳು ಏಕಕಾಲಕ್ಕೆ ಮುಗಿದು ಹೋಗಬಾರದು ಅವುಗಳನ್ನು ನಾವು ಸೂಕ್ತ ರೀತಿಯಲ್ಲಿ ಬಳಸಬೇಕು. ಇನ್ನು ಮುಖ್ಯವಾಗಿ ಶ್ರದ್ಧೆ ಆಸಕ್ತಿ ಇದ್ದರೆ ಮಾತ್ರ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖಸ್ಥರು, ಪ್ರಾಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ್ ಹೆಚ್. ಕಾರ್ಯಕ್ರಮವನ್ನು ನಿರೂಪಿಸಿದರು. ಹರೀಶ್ ಭಂಡಾರಿ ಅವರು ಗಣ್ಯರನ್ನು ಸ್ವಾಗತಿಸಿದರು. ದೊಡ್ಡಮನೆ ಜ್ಯೋತಿ ಕಾರ್ಯಕ್ರಮವನ್ನು ವಂದಿಸಿದರು.





ಸಂಗೀತ ಮತ್ತು ನೃತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಪಂ. ಪಂಚಾಕ್ಷರಿ ಗವಾಯಿಗಳು
ಹಾಗೂ
ಡಾ. ಗಂಗೂಬಾಯಿ ಹಾನಗಲ್
ಅವರ ಜನ್ಮದಿನದ ಪ್ರಯುಕ್ತ
ವಿಶೇಷ ಉಪನ್ಯಾಸ ಹಾಗೂ ಸಂಗೀತ ಕಾರ್ಯಕ್ರಮ

*

ಸ್ವಾಗತ ಮತ್ತು ಪ್ರಾಸ್ತಾವಿಕ
ಡಾ. ವೀರೇಶ ಬಡಿಗೇರ
ಮುಖ್ಯಸ್ಥರು, ಸಂಗೀತ ಮತ್ತು ನೃತ್ಯ ವಿಭಾಗ

*

ವಿಶೇಷ ಉಪನ್ಯಾಸ : ೧
ಪಂ. ಪಂಚಾಕ್ಷರಿ ಗವಾಯಿಗಳ ಜೀವನ ಮತ್ತು ಸಾಧನೆ
ಡಾ. ಕಾಶಿಲಿಂಗ ಮಠ
ಮುಖ್ಯಸ್ಥರು ಸಂಗೀತ ಮತ್ತು ನೃತ್ಯ ವಿಭಾಗ
ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟ

ವಿಶೇಷ ಉಪನ್ಯಾಸ : ೨
ಡಾ. ಗಂಗೂಬಾಯಿ ಹಾನಗಲ್ ಜೀವನ ಮತ್ತು ಸಾಧನೆ
ಪ್ರೊ. ಮಹೇಶಕುಮಾರ್ ಈ ಬಡಿಗೇರ
ಮುಖ್ಯಸ್ಥರು, ಸಂಗೀತ ವಿಭಾಗ
ಎನ್. ವಿ ಡಿಗ್ರಿ ಕಾಲೇಜು, ಕಲಬುರ್ಗಿ

ಅಧ್ಯಕ್ಷತೆ
ಡಾ. ಡಿ.ವಿ. ಪರಮಶಿವಮೂರ್ತಿ
ಮಾನ್ಯ ಕುಲಪತಿಗಳು

ದಿನಾಂಕ: ೦೫.೦೩.೨೦೨೫, ಸಮಯ: ಮಧ್ಯಾಹ್ನ ೦೩.೦೦ ಗಂಟೆಗೆ
ಸ್ಥಳ: ಸಂಗೀತ ಮತ್ತು ನೃತ್ಯ ವಿಭಾಗ

ಆದರದ ಸ್ವಾಗತ
ಡಾ. ವಿಜಯ್ ಪೂಣಚ್ಚ ತಂಬಂಡ
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ